


ಟೆಕ್ನಿಕಲ್ ಅನಲಿಸಿಸ್ ಮತ್ತು ಆ ಕಂಪನಿಯ ಬಗ್ಗೆ ಪೇಟೆಯ ಮೂಡ್ ಹೇಗಿದೆ ಎಂಬುದನ್ನು ಹೆಚ್ಚಾಗಿ ಗಮನಿಸಿ.

- ದೀರ್ಘಕಾಲೀನ ಹೂಡಿಕೆ ನಿಮ್ಮ ಉದ್ದೇಶವಾಗಿದ್ದರೆ ಟೆಕ್ನಿಕಲ್ ಜೊತೆಗೆ ಕಂಪನಿಗಳ ಫಂಡಮೆಂಟಲ್ ಅನಲಿಸಿಸ್ ಕಡೆಗೂ ಸಾಕಷ್ಟು ಗಮನಕೊಡಿ.
- ಒಂದುಮಟ್ಟಿಗಿನ ಅನುಭವ ಮತ್ತು ಆತ್ಮವಿಶ್ವಾಸ ಬರುವವರೆಗೆ ಫ್ಯೂಚರ್ ಅಂಡ್ ಆಪ್ಷನ್, ಡೇ ಟ್ರೇಡಿಂಗ್, ಬಿಟಿಎಸ್‌ಟಿ ಬೇಡ. ಒಂದು ವೇಳೆ ಮಾಡುವುದಿದ್ದರೂ ಕ್ಯಾಶ್‌ನಲ್ಲಿ ಖರೀದಿಸುವ ಸಾಮರ್ಥ್ಯದಷ್ಟೇ ವಹಿವಾಟು ಇರಲಿ.
- ಸ್ಟಾಪ್‌ಲಾಸ್ ಬಗ್ಗೆ ಸದಾ ಎಚ್ಚರವಿರಲಿ.
- ಬೇರೊಂದು ಕೆಲಸವಿದ್ದು, ಷೇರುಪೇಟೆ ವಹಿವಾಟು ನಡೆಯುತ್ತಿರುವ ಸಮಯದಲ್ಲಿ ಗಮನಕೊಡಲು ಆಗುವುದಿಲ್ಲ ಅಂತಾದ್ರೆ ಟ್ರೇಡಿಂಗ್ ಮಾಡದಿರುವುದೇ ಒಳ್ಳೆಯದು. ಅಸಲಾದ್ರೂ ಕೈಲಿರುತ್ತೆ.
- ಪೇಟೆಗೆ ಬಂದವರಿಗೆ ಅಧ್ಯಯನ ಅತ್ಯಗತ್ಯ, ಅನಿವಾರ್ಯ.ನಿಮ್ಮ ಜ್ಞಾನವೇ ನಿಮ್ಮ ಗೆಳೆಯ ಮತ್ತು ನಿಮಗೆ ಲಾಭತಂದುಕೊಡುವ ಗುರು.
- ನಿಮ್ಮ ಮನೆಗೆ ತರುವ ದಿನಸಿಯ ಬ್ರಾಂಡ್, ದಿನಪತ್ರಿಕೆಯಲ್ಲಿ ಬಂದ ಸಣ್ಣ ಸುದ್ದಿ, ಗೆಳೆಯರು ಲೋಕಾರೂಢಿ ಆಡುವ ಮಾತು ಸಹ ನಿಮಗೆ ಹೊಸ ಹೂಡಿಕೆಯ ಹೊಳಹು ಕೊಡಬಲ್ಲದು.
- ಸಂಖ್ಯಾಶಾಸ್ತ್ರ ಮತ್ತು ಆರ್ಥಿಕತೆಯ ಅರಿವು ಹೆಚ್ಚಿಸಿಕೊಳ್ಳಲು ಗಮನಕೊಡಿ.

## ಅರಿವಿನಿಂದ ಸುಳಿವು

ಎಂಥ ಕಂಪನಿಯ ಷೇರುಗಳನ್ನು ಯಾವಾಗ ಮತ್ತು ಎಷ್ಟು ಬೆಲೆಗೆ ಖರೀದಿಸಬೇಕು / ಮಾರಬೇಕು ಎನ್ನುವುದರಲ್ಲಿಯೇ ಷೇರುಪೇಟೆ ವಿಜ್ಞಾನದ ಸರ್ವಸ್ವವೂ ಅಡಗಿದೆ. ಇದನ್ನೇ ಷೇರು ದಲ್ಲಾಳಿ ಕೃಪಾಲ್ ಅವರು, 'ಅಧ್ಯಯನದಿಂದ ಅರಿವು, ಅನುಭವದಿಂದ ತಿಳಿವು, ಚಿಂತನೆಯಿಂದ ಸುಳಿವು, ಅರಿವು–ತಿಳಿವು–ಸುಳಿವುಗಳಿಂದ ಉಳಿವು' ಎಂದು ಕವಿತೆಕಟ್ಟಿ ವಿವರಿಸುತ್ತಾರೆ.

ಈ ಹಿಂದೆ ಷೇರುಪೇಟೆಯ ಮಾಹಿತಿ ಸಿಗುವುದೇ ಕಷ್ಟವಾಗುತ್ತಿತ್ತು. ವಹಿವಾಟಿನ ವಿವರವನ್ನು ಮಾರನೇ ದಿನ ಪತ್ರಿಕೆಯಲ್ಲಿ ಓದಿ ತಿಳಿದುಕೊಳ್ಳಬೇಕಾಗುತ್ತಿತ್ತು. ಪುಸ್ತಕಗಳು, ಹಿರಿಯರ ಮುಖತಃ ಮಾರ್ಗದರ್ಶನ ಮತ್ತು ವೈಯಕ್ತಿಕ ಅನುಭವಗಳು ಮಾತ್ರ ಅರಿವು ಹೆಚ್ಚಿಸುವ ಸಾಧನಗಳಾಗಿದ್ದವು. ಹೆಜ್ಜೆಹೆಜ್ಜೆಗೂ ದಲ್ಲಾಳಿಗಳ ನೆರವು ಬೇಕಾಗುತ್ತಿತ್ತು. ಆದರೆ ಈಗ ಪರಿಸ್ಥಿತಿ ಬದಲಾಗಿದೆ. ಷೇರುಪೇಟೆಯನ್ನು ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂದು ವಿವರಿಸುವ ಸಾವಿರಗಟ್ಟಲೆ ವಿಡಿಯೊಗಳು ಯುಟ್ಯೂಬ್‌ನಲ್ಲಿವೆ. 'ಸ್ಪೋಟಿಫೈ'ನಂಥ ಪಾಡ್‌ಕಾಸ್ಟ್ ಚಾನೆಲ್‌ಗಳಲ್ಲಿಯೂ ಬೇಕಾದಷ್ಟು ಮಾಹಿತಿಯಿದೆ. ಸಾಲದ್ದಕ್ಕೆ ಆನ್‌ಲೈನ್ ಕೋರ್ಸ್‌ಗಳಿವೆ. ಕೋವಿಡ್‌ಗೆ ಮೊದಲು ಸಾಕಷ್ಟು ಸೆಮಿನಾರ್‌ಗಳು ನಡೆಯುತ್ತಿದ್ದವು. ಈಗ ವೆಬಿನಾರ್‌ಗಳು ನಡೆಯುತ್ತಿವೆ. ಉತ್ತಮ ಗುಣಮಟ್ಟದ ಇಂಥ ಕಂಟೆಂಟ್ ಉಚಿತವಾಗಿಯೂ ಲಭ್ಯವಿದೆ ಎನ್ನುವುದು ವಿಶೇಷ.

'ಹೊಸ ಕಾಲದ ಈ ಬೆಳವಣಿಗೆಗಳಿಂದ ಅನುಕೂಲವೆಷ್ಟಾಗಿದೆಯೋ ಅನನುಕೂಲವೂ ಅಷ್ಟೇ ಆಗಿದೆ' ಎನ್ನುತ್ತಾರೆ ಹಿರಿಯರಾದ ಕೃಪಾಲ್.

'ಇನ್‌ಸ್ಟಂಟ್ ಯುಗದಲ್ಲಿ ಎಲ್ಲವೂ ತತ್‌ಕ್ಷಣಕ್ಕೆ ಆಗಬೇಕು. ಜ್ಞಾನದ ವಿಚಾರದಲ್ಲಿ ಹೀಗೆ ಇನ್‌ಸ್ಟಂಟ್ ಸಾಧ್ಯವಿಲ್ಲ. ಹಂತಹಂತವಾಗಿ ಅದು ವಿಸ್ತಾರಗೊಳ್ಳಬೇಕು. ಒಂದು ಕಂಪನಿಯ ವಹಿವಾಟನ್ನು ನಮ್ಮ ದೇಶದ ಅರ್ಥ ವ್ಯವಸ್ಥೆ, ಸರ್ಕಾರಗಳು ತೆಗೆದುಕೊಳ್ಳುವ ನಿರ್ಧಾರಗಳು,

### ಭಾವನೆಗಳ ಮೇಲೆ ನಿಯಂತ್ರಣವಿರಲಿ



ಭಾವನೆಗಳನ್ನು ನಿಯಂತ್ರಿಸಿಕೊಳ್ಳೋದು ಷೇರುಪೇಟೆಗೆ ಬರುವವರು ಕಲಿಯಬೇಕಾದ ಮೊದಲ ವಿದ್ಯೆ. ಆಮೇಲೆ ಟೆಕ್ನಿಕಲ್ಸ್, ಫಂಡಮೆಂಟಲ್ಸ್ ಇತ್ಯಾದಿ ಇತ್ಯಾದಿ. ಅಧ್ಯಯನದ ಆಧಾರದ ಮೇಲೆ ಹಣ ಹಾಕಿ, ಹಣ ತೆಗೆಯಬೇಕು. ಲಾಭಕ್ಕೆ ಮತ್ತು ನಷ್ಟಕ್ಕೆ ಮಿತಿ ಇರಬೇಕು. ಡೇ ಟ್ರೇಡಿಂಗ್ ಮಾಡುವ ಕೆಲವರು ಬಂದ ಲಾಭ ಬುಕ್ ಮಾಡಿಕೊಳ್ಳದೇ ಅತ್ಯಾಸೆಯಿಂದ ನಷ್ಟ ಅನುಭವಿಸುತ್ತಾರೆ. ಕೆಲವರು ಸ್ಟಾಪ್ ಲಾಸ್ ಫಾಲೊ ಮಾಡದೆ ಅಸಲನ್ನೇ ಕಳೆದುಕೊಳ್ಳುತ್ತಾರೆ.

ಡೇ ಟ್ರೇಡಿಂಗ್‌ಗೆ ಬಂದವರು 100 ರೂಪಾಯಿ ಹೂಡಿಕೆ ಮಾಡಿದಾಗಲೇ 115ಕ್ಕೆ ಸ್ಕೇರ್ ಆಫ್ ಮಾಡಿ ಲಾಭ ತಗೊಳ್ತೀನಿ ಅಂತ, 95ಕ್ಕೆ ಹೋದ್ರೆ ಸ್ಟಾಪ್‌ಲಾಸ್ ಮಾಡಿಕೊಳ್ತೀನಿ ಮೊದಲೇ ಅಂತ ನಿರ್ಧಾರ ಮಾಡಿಕೊಂಡಿರಬೇಕು. ಆದರೆ ಇಂಥ ನಿರ್ಧಾರಗಳನ್ನೂ ಮರೆಸುವ ಶಕ್ತಿ ಮಾರುಕಟ್ಟೆಯ ಸೆಳೆತಕ್ಕಿದೆ. ಇಂಥ ಸೆಳೆತಗಳನ್ನು ಮೀರುವ ಮಾನಸಿಕ ಸಾಮರ್ಥ್ಯವಿದ್ದರೆ ಮಾತ್ರ ಅಲ್ಲಿ ನಾವು ಗೆಲ್ತೀವಿ.

**–ಶ್ರೀವತ್ಸ**, ಟ್ರೇಡರ್